ನೋಡಿದರೆ ಆನಂದರಾಮ್ ತನ್ನ ನರ ಕತ್ತರಿಸಿಕೊಂಡು ಸತ್ತು ಬಿದ್ದಿದ್ದ. ಸತ್ತು ಸುಮಾರು ಎರಡು ದಿನ ಆಗಿತ್ತು."

"ಹಾಗಿದ್ದರೆ ಅದು ಆತ್ಮಹತ್ಯೆ ಅಲ್ಲವೇ?"

"ಇಲ್ಲ, ಫೋರೆನ್ಸಿಕ್‌ನವರಿಂದ ಸಾವು ಸಂಭವಿಸಿದ ನಂತರ ನರ ಕಟ್ ಮಾಡಿರುವುದು ಗೊತ್ತಾಗಿದೆ..."

"ಗುಡ್, ಈ ಪಾಯಿಂಟ್‌ನಿಂದ ಆ ಸಾವನ್ನು ಕೊಲೆ ಎಂದು ಬಿಂಬಿಸಬಹುದು" ಎಂದು ವೇಗವಾಗಿ ತನ್ನ ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡತೊಡಗಿದ.

"ಆದರೆ ಕೊಲೆ ಆದ ಹಿಂದಿನ ದಿನ ನೀವ್ಯಾಕೆ ಅವನ ಮನೆಗೆ ಹೋಗಿದ್ರಿ? ಅದೇ ನಿಮ್ಮ ಮೇಲೆ ಸಂಶಯಕ್ಕೆ ಎಡೆಮಾಡಿದ್ದು ನೋಡಿ" ನಾಗರಾಜಯ್ಯ ಯಾವುದೇ ಏರಿಳಿತವಿಲ್ಲದೇ ಕೇಳಿದ.

ಕಾಮತ್ ಬೆದರಿದ. ಒಮ್ಮೆ ನಾಗರಾಜಯ್ಯನ ಕಡೆ ನೋಡಿದ. ಅವನ ಮುಖದಲ್ಲಿ ಯಾವ ಭಾವವೂ ಇರಲಿಲ್ಲ.

"ಸ್ವಲ್ಪ ದುಡ್ಡುಕೊಟ್ಟು ಸೆಟಲ್ ಮಾಡಿಕೊಳ್ಳುವಾ ಅಂತಾ ಹೋಗಿದ್ದೆ. ನಿಮ್ಮ ರಿಪೋರ್ಟ್ ಪ್ರಕಾರ ನಾನು ಹೋಗಿದ್ದೆ ಅಂತಾ ಇಲ್ಲ. ಆದರೆ ಅವನ ಮನೆಯಲ್ಲಿ ಐದು ಲಕ್ಷ ಸಿಕ್ಕಿತು ಎಂದು ಮಹಜರ್ ರಿಪೋರ್ಟ್‌ನಲ್ಲಿ ಇತ್ತು. ಅದನ್ನೇ ನನ್ನ ಮೇಲೆ ಅನುಮಾನ ಬರುವ ಹಾಗೆ ಬರೆಯುತ್ತೇನೆ ತಾಳಿ" ಕಾಮತ್ ತನ್ನ ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡುತ್ತಿದ್ದರೂ ಒಂದು ಕಣ್ಣಿನಲ್ಲಿ ನಾಗರಾಜಯ್ಯನನ್ನು ಗಮನಿಸುತ್ತಿದ್ದ. ಅವನಲ್ಲಿ ಯಾವ ಭಾವನೆಯೂ ಇರಲಿಲ್ಲ. ಸರಸರನೆ ಟೈಪ್ ಮಾಡಿ ತಲೆ ಎತ್ತಿದ. ಒಮ್ಮೆ ಸಣ್ಣನೆ ತಲೆ ತಿರುಗಿತು. ಎ.ಸಿ.ಯಿಂದ ತಣ್ಣಗಿನ ಹವೆ ಬರುತ್ತಿದ್ದರೂ ಸಣ್ಣದಾಗಿ ಬೆವರತೊಡಗಿದ. ವಿಸ್ಕಿಯ ನಶೆ ಸಣ್ಣದಾಗಿ ಏರತೊಡಗಿತು.

"ವಿಚಿತ್ರ ಅಂದರೆ ಕೊಲೆ ಆದ ದಿನ ಆನಂದರಾಮ್ ಸುಮಾರು ಐದು ಬಾರಿ ಪಿಜ್ಜಾಗಳನ್ನು ಆರ್ಡರ್ ಮಾಡಿದ್ದ. ಅಪಾರ್ಟ್‌ಮೆಂಟ್‌ನ ಸೆಕ್ಯುರಿಟಿಯನ್ನು ವಿಚಾರಿಸಿದಾಗ ಆನಂದರಾಮ್ ಪಿಜ್ಜಾ ಡೆಲಿವರಿಯವರಿಗೆ ಚೆನ್ನಾಗಿ ಬೈದು ಪಿಜ್ಜಾ ಡೆಲಿವರಿ ತೆಗೆದುಕೊಂಡು ಓಡಿಸಿದ್ದನಂತೆ" ಎಂದು ನಿಧಾನವಾಗಿ ನಾಗರಾಜಯ್ಯ ನುಡಿದ.

"ಒಳ್ಳೆಯ ಟ್ವಿಸ್ಟ್, ಸಾರ್. ಸಕತ್ ಆಗಿದೆ. ಅಂದರೆ ಕೊಲೆಗಾರ ಪಿಜ್ಜಾ ಡೆಲಿವರಿ ಬಾಯ್ ಥರ ಬಂದು ಕೊಲೆ ಮಾಡಿ ಹೋಗಿದ್ದಾನೆ. ಪೊಲೀಸರಿಗೆ ಕನ್‌ಫ್ಯೂಸ್ ಮಾಡಲು ಯಾರೋ ಐದಾರು ಜನರನ್ನ ಆನಂದರಾಮ್ ಎಕ್ಸ್‌ಪೆಕ್ಟ್ ಮಾಡುತ್ತಿದ್ದ ಎಂದು ಬಿಂಬಿಸಲು ಐದು ಪಿಜ್ಜಾ ಆರ್ಡರ್ ಮಾಡಿದ್ದ ಎಂದು ಆಯಿತು."

"ಇರಬಹುದು! ಪೊಲೀಸ್ ಇನ್ವೆಸ್ಟಿಗೇಶನ್ ಪಿಜ್ಜಾದವರನ್ನು ವಿಚಾರಿಸುವುದರ ತನಕ ಹೋಗಿ ಅಲ್ಲಿಗೆ ನಿಂತಿತು. ಯಾಕೆಂದರೆ ಅವರ್‍ಯಾರೂ ತಲೆಕೆಡಿಸಿಕೊಂಡಿರಲಿಲ್ಲ. ಅವರೆಲ್ಲರ ಪಿಜ್ಜಾದ ಪೇಮೆಂಟ್ ಅನ್ನು ಆನಂದರಾಮ್ ತನ್ನ ಮೊಬೈಲ್ ಮೂಲಕ ಪಾವತಿಸಿ ಆರ್ಡರ್ ಮಾಡಿದ್ದ."

ಒಂದುಕ್ಷಣ ಸೂರ್ಯ ಕಾಮತ್ ನಾಗರಾಜಯ್ಯನ ಕಡೆ ಕಣ್ಣೆತ್ತಿ ನೋಡಿದ. ಅವನ ಕಣ್ಣುಗಳು ತನ್ನನ್ನೇ ಗಮನಿಸುತ್ತಿರುವುದನ್ನು ಕಂಡು ಒಂದು ಕ್ಷಣ ಬೆದರಿದ. 'ಇವನಿಗೆ ನಿಜ ತಿಳಿದು ನನ್ನೊಡನೆ ಮಾತಾಡುತ್ತಿದ್ದಾನಾ ಅಥವಾ ಮೇಲ್ನೋಟಕ್ಕೆ ಕಾಣುವಂತೆ ನಿಜವಾಗಿಯೂ ನನ್ನ ಅಭಿಮಾನಿಯಾಗಿಯೇ ಬಂದಿದ್ದಾನಾ? ತಿಳಿಯದು. ಸ್ವಲ್ಪ ಹುಷಾರಾಗಿರಬೇಕು' ಎಂದು ಮನಸ್ಸಿನಲ್ಲಿಯೇ ಅಂದುಕೊಂಡ. ಆದರೆ ಅವನ ದೇಹ ಅವನ ಕಂಟ್ರೋಲ್‌ನಲ್ಲಿ ಇಲ್ಲದಂತೆ ಅನಿಸತೊಡಗಿತು. ಮತ್ತೆ ಒಂದು ಪೆಗ್ ಏರಿತು.